## ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಮಂಗಳೂರು ಮತ್ತು
## ಮೀನುಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ

## ಇವರ ಜಂಟಿ ಆಶ್ರಯದಲ್ಲಿ

# ಪಿಲಿಕುಳ ಮತ್ಸ್ಯೋತ್ಸವ – 2023

ಪಿಲಿಕುಳದ ಕೆರೆಯಲ್ಲಿ ಹಿಡಿದ ವಿವಿಧ ಮೀನುಗಳ ಸಾರ್ವಜನಿಕ ಮಾರಾಟ

**ಜುಲಾಯಿ 2 (ಆದಿತ್ಯವಾರ), 2023**

# ವರದಿ

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಕೆರೆಯಲ್ಲಿ ಬೆಳೆಸಿದ ಬಲಿತ ಮೀನುಗಳನ್ನು ಹಿಡಿದು ಸಾರ್ವಜನಿಕರಿಗೆ ಮಾರಾಟ ಮಾಡುವ ಕಾರ್ಯಕ್ರಮವನ್ನು ಪ್ರತೀ ವರ್ಷವು ನಡೆಸಲಾಗುತ್ತಿದೆ. ಈ ಬಾರಿ ದಿನಾಂಕ 2–07–2023 ರಂದು ಪಿಲಿಕುಳದ ವಿಸ್ತಾರವಾದ ಕೆರೆಯಲ್ಲಿ ಬೆಳೆಸಿದ ಕಾಟ್ಲಾ, ರೋಹು, ಗೆಂಡೆ, ಗೌರಿ, ತಿಲೇಪಿಯಾ ಮುಂತಾದ ಮೀನುಗಳನ್ನು ಹಿಡಿದು ಮಾರಾಟ ಕಾರ್ಯಕ್ರಮವು ಯಸಸ್ವಿಯಾಗಿ ನಡೆಯಿತು.

ಕಾರ್ಯಕ್ರಮವನ್ನು ಜಿ.ಪಂ ಸಿಇಒ ಡಾ. ಕೆ. ಆನಂದ್ ಇವರು ಉದ್ಘಾಟಿಸಿದರು. ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಅಭಿಷೇಕ್. ವಿ., ಆಡಳಿತಾಧಿಕಾರಿ ಶ್ರೀ ಮನೀಶ್ ನಾಯ್ಕ, ಮೀನುಗಾರಿಕಾ ಇಲಾಖೆಯ ಸಹ ನಿರ್ದೇಶಕರಾದ ಶ್ರೀ ದಿಲೀಪ್, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕರಾದ ಡಾ. ಕೆ. ವಿ. ರಾವ್, ಬಾಟಾನಿಕಲ್ ವಿಭಾಗದ ಪ್ರಧಾನ ವಿಜ್ಞಾನಿ ಡಾ. ಸೂರ್ಯಪ್ರಕಾಶ್ ಶೆಣೈ, ಪಿಲಿಕುಳ ಸಂಸ್ಕೃತಿ ಗ್ರಾಮದ ಯೋಜನಾಧಿಕಾರಿ ಡಾ. ನಿತಿನ್ ಮತ್ತಿತರರು ಉಪಸ್ಥಿತರಿದ್ದರು. ಶ್ರೀ ರಾಮಕಷ್ಣ ಮರಾಟಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಈ ಮೇಳದಲ್ಲಿ ಅಂದಾಜು 500 ಕ್ಕೂ ಹೆಚ್ಚು ಜನ ಸಾರ್ವಜನಿಕರು ಭಾಗವಹಿಸಿ ತಾಜಾ ಮೀನುಗಳನ್ನು ಖರೀದಿಸಿದರು. ಮೇಳದಲ್ಲಿ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಿಂದ ವಿವಿಧ ಸಮುದ್ರದ ಮೀನಿನ ಖಾದ್ಯಗಳು ಸಾರ್ವಜನಿಕರಿಗೆ ಲಭ್ಯವಿದ್ದವು.




ಪಿಲಿಕುಳ ಮತ್ಸ್ಯೋತ್ಸವ – 2023




ಅಭಿವೃದ್ಧಿ ಪ್ರಾಧಿಕಾರ ಮತ್ತು
ಮೀನುಗಾರಿಕಾ ಇಲಾಖೆ, ಕರ್ನಾಟಕ ಸರಕಾರ
ಇವರ ಜಂಟಿ ಆಶ್ರಯದಲ್ಲಿ
ಪಿಲಿಕುಳ ಮತ್ಸ್ಯೋತ್ಸವ
DRESSING ROOM











